**ಶಿವಮೊಗ್ಗ,ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,**

**ಮಾಚೇನಹಳ್ಳಿ, ನಿದಿಗೆ(ಅಂಚೆ), ಶಿವಮೊಗ್ಗ– 577 222, ☎ 08182–246165 www.shimul.coop**

ಐ.ಎಫ್.ಟಿ. ಸಂಖ್ಯೆ/ಶಿಸಹಾಒ/ಶೇಮತಾಂ/ಟೆಂಡರ್/102/2016–17/6558 **ದಿನಾಂಕ: 22.11.2016**

**–:ಕಾರುಗಳನ್ನು ಗುತ್ತಿಗೆ ಆಧಾರದಲ್ಲಿ ದ್ವೈವಾರ್ಷಿಕ ಅವಧಿಗೆ ಒದಗಿಸಲು ಟೆಂಡರ್ ಪ್ರಕಟಣೆ:–**

ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿ ಈ ಕೆಳಗೆ ನಮೂದಿಸಿದಂತೆ ಕಚೇರಿ/ಕ್ಷೇತ್ರ ಕೆಲಸ ಕಾರ್ಯಗಳಿಗೆ/ಮಾರುಕಟ್ಟೆ ಕೆಲಸ ಕಾರ್ಯಗಳಿಗೆ ಸಂಚಾರಿ ಪಶುವೈದ್ಯಕೀಯ ಮಾರ್ಗಕ್ಕೆ 2010 ರ ಅಥವಾ ನಂತರದ ಮಾದರಿಯ ಟಾಟಾ ಇಂಡಿಗೋ/ಇಂಡಿಕಾ/ವಿಸ್ತಾ ಕಾರುಗಳನ್ನು ಎರಡು ವರ್ಷದ ಗುತ್ತಿಗೆ/ಬಾಡಿಗೆ ಆಧಾರದ ಮೇಲೆ ಒದಗಿಸಲು ಕರ್ನಾಟಕ ಸರ್ಕಾರದ ಪಾರದರ್ಶಕ ದ್ವಿಲಕೋಟೆ ಪದ್ಧತಿಯಡಿ ಟೆಕ್ನಿಕಲ್/ಕಮರ್ಷಿಯಲ್ (ದರ) ಹೊಂದಿದ ಪ್ರತ್ಯೇಕ ಲಕೋಟೆಗಳಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

| | | |
|---|---|---|
| 1 | ಟೆಂಡರ್ ಫಾರಂ ಮಾರಾಟ ಮಾಡುವ ದಿನಾಂಕ | **28.11.2016 ರಿಂದ 27.12.2016** ಬೆಳಿಗ್ಗೆ: 11.00ಗಂಟೆಯವರೆಗೆ |
| 2 | ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಸಲ್ಲಿಸಲು ಕೊನೆಯ ದಿನಾಂಕ | 27.12.2016 ರಂದು ಬೆಳಿಗ್ಗೆ: 11.30 ಗಂಟೆಯವರೆಗೆ |
| 3 | **ಟೆಕ್ನಿಕಲ್/ಕಮರ್ಷಿಯಲ್ ಟೆಂಡರ್ ತೆರೆಯುವ ದಿನ** | 27.12.2016 ರಂದು ಬೆಳಿಗ್ಗೆ: 11.45 ಗಂಟೆಗೆ |
| 5 | **ಟೆಂಡರ್ ಫಾರಂ ಮಾರಾಟ ದರ** | **ರೂ. 500/– ತೆರಿಗೆ ಸಹಿತ** |
| 6 | **ಟೆಂಡರ್ ಫಾರಂ ಅಂಚೆ ಮೂಲಕ ಪಡೆಯಲು** | **ರೂ. 550/– ಸಕಾಲದಲ್ಲಿ ತಲುಪದಿದ್ದಲ್ಲಿ ಶಿವಮೊಗ್ಗ ಹಾಲು ಒಕ್ಕೂಟವು ಹೊಣೆಗಾರರಲ್ಲ.** |

**I.** ಈ ಕೆಳಗೆ ನಮೂದಿಸಿದ ಕಚೇರಿ/ಕ್ಷೇತ್ರ ಕೆಲಸ ಕಾರ್ಯಗಳಿಗೆ/ಮಾರುಕಟ್ಟೆ ಕೆಲಸ ಕಾರ್ಯಗಳಿಗೆ ಸಂಚಾರಿ ಪಶುವೈದ್ಯಕೀಯ ಮಾರ್ಗಕ್ಕೆ 2010 ರ ಅಥವಾ ನಂತರದ ಮಾದರಿಯ ಟಾಟಾ ಇಂಡಿಗೋ/ಇಂಡಿಕಾ/ವಿಸ್ತಾ ಕಾರುಗಳನ್ನು **ಎರಡು ವರ್ಷದ** ಅವಧಿಗೆ ಅಥವಾ ಸಂಚಾರಿ ಪಶುವೈದ್ಯಕೀಯ ಮಾರ್ಗಕ್ಕೆ ಪಶುವೈದ್ಯರು ಲಭ್ಯವಿರುವವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ಮಾತ್ರ ಗುತ್ತಿಗೆ/ಬಾಡಿಗೆ ಆಧಾರದ ಮೇಲೆ ಒದಗಿಸಲು ಟೆಂಡರ್ ಕರೆಯಾಲಾಗಿದೆ.

| ಮಾರ್ಗದ ಸಂಖ್ಯೆ | ಕಾರಿನ ಮಾರ್ಗದ ಹೆಸರು | ವಾಹನ ಮಾದರಿ | ಮಾಸಿಕ ಅಂದಾಜು ಅಂತರ ಕಿ.ಮೀ | ಇ.ಎಂ.ಡಿ ₹ | ಭದ್ರತಾ ಠೇವಣಿ ₹ |
|---|---|---|---|---|---|
| 1 | ಶಿವಮೊಗ್ಗ ಎಂ.ವಿ.ಆರ್.–1ಮಾರ್ಗ ಶಿವಮೊಗ್ಗ | ಟಾಟಾ ಇಂಡಿಕಾ/ಇಂಡಿಗೋ/ವಿಸ್ತಾ | 3000 ಕಿ.ಮೀ | 10,000/– | 20,000/– |
| 2 | ಶಿವಮೊಗ್ಗ ಎಂ.ವಿ.ಆರ್.–2 ಮಾರ್ಗ ಶಿವಮೊಗ್ಗ | ಟಾಟಾ ಇಂಡಿಕಾ/ಇಂಡಿಗೋ/ವಿಸ್ತಾ | 3000 ಕಿ.ಮೀ | 10,000/– | 20,000/– |
| 3 | ಚಿತ್ರದುರ್ಗ ಎಂ.ವಿ.ಆರ್. ಮಾರ್ಗ ಚಿತ್ರದುರ್ಗ | ಟಾಟಾ ಇಂಡಿಕಾ/ಇಂಡಿಗೋ/ವಿಸ್ತಾ | 3000 ಕಿ.ಮೀ | 10,000/– | 20,000/– |
| 4 | ಹರಪನಹಳ್ಳಿ ಎಂ.ವಿ.ಆರ್ ಮಾರ್ಗ ಹರಪನಹಳ್ಳಿ | ಟಾಟಾ ಇಂಡಿಕಾ/ಇಂಡಿಗೋ/ವಿಸ್ತಾ | 3000 ಕಿ.ಮೀ | 10,000/– | 20,000/– |
| 5 | ದಾವಣಗೆರೆ ಎಂ.ವಿ.ಆರ್–2 ಮಾರ್ಗ ದಾವಣಗೆರೆ | ಟಾಟಾ ಇಂಡಿಕಾ/ಇಂಡಿಗೋ/ವಿಸ್ತಾ | 3000 ಕಿ.ಮೀ | 10,000/– | 20,000/– |
| 6 | ಚಳ್ಳಕೆರೆ ಎಂ.ವಿ.ಆರ್. ಮಾರ್ಗ ಚಳ್ಳಕೆರೆ | ಟಾಟಾ ಇಂಡಿಕಾ/ಇಂಡಿಗೋ/ವಿಸ್ತಾ | 3000 ಕಿ.ಮೀ | 10,000/– | 20,000/– |
| 7 | ಚಿತ್ರದುರ್ಗ ಮಾರುಕಟ್ಟೆ ಕಾರಿನ ಮಾರ್ಗ ಚಿತ್ರದುರ್ಗ | ಟಾಟಾ ಇಂಡಿಕಾ/ಇಂಡಿಗೋ/ವಿಸ್ತಾ | 3000 ಕಿ.ಮೀ | 10,000/– | 20,000/– |
| 8 | ದಾವಣಗೆರೆ ಮಾರುಕಟ್ಟೆ ಕಾರಿನ ಮಾರ್ಗ ದಾವಣಗೆರೆ | ಟಾಟಾ ಇಂಡಿಕಾ/ಇಂಡಿಗೋ/ವಿಸ್ತಾ | 3000 ಕಿ.ಮೀ | 10,000/– | 20,000/– |

**ನಿಬಂಧನೆ ಮತ್ತು ಷರತ್ತುಗಳು**

1. **ಟೆಂಡರ್ ಸಲ್ಲಿಸ ಬಯಸುವವರು ತಮ್ಮ ಹೆಸರಿಗೆ ಕಡ್ಡಾಯವಾಗಿ ವಾಹನವನ್ನು/ದಾಖಲಾತಿಗಳನ್ನು ಹೊಂದಿರತಕ್ಕದ್ದು. ವಾಹನ ಹೊಂದಿಲ್ಲದವರು ಟೆಂಡರ್ ದರ ಒಪ್ಪಿಗೆಯಾದ 30 ದಿನದೊಳಗೆ ಟೆಂಡರ್‌ನಲ್ಲಿ ಪ್ರಕಟಿಸಿದ ನಿಗದಿತ ಮಾದರಿಯ ವಾಹನ ಖರೀದಿಸಿ ನೀಡಬಹುದು. ತಪ್ಪಿದಲ್ಲಿ ಟೆಂಡರ್ ನಿಯಮಾನುಸಾರ ಇ.ಎಂ.ಡಿ. ಹಣ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.**

**P.T.O**

2. **ಇ.ಎಂ.ಡಿ. ರೂ. 10,000/- ಟೆಂಡರ್ ಸಲ್ಲಿಸಬಯಸುವವರು ಟೆಂಡರ್ ಪ್ರಕಟಣೆಯಲ್ಲಿ ನಮೂದಿಸಿರುವ ಪ್ರತಿ ಮಾರ್ಗಗಳ ಮುಂದೆ ಸೂಚಿಸಿರುವಂತೆ ಇ.ಎಂ.ಡಿ. ಮೊತ್ತದ ಡಿ.ಡಿ. ಯನ್ನು ಬ್ಯಾಂಕಿನಿಂದ ವ್ಯವಸ್ಥಾಪಕ ನಿರ್ದೇಶಕರು ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಒಕ್ಕೂಟ (Managing Director, Shimoga, Davanagere & Chitradurga Milk Union, shimoga payable at shimog or Machenahalli.) ಇವರ ಹೆಸರಿಗೆ ಪಾವತಿಯಾಗುವಂತೆ ಖರೀದಿಸಿ ಟೆಕ್ನಿಕಲ್ ಟೆಂಡರ್ ಫಾರಂ ಜೊತೆಗೆ ತಪ್ಪದೆ ಲಗತ್ತಿಸಿರಬೇಕು. ಮತ್ತು ಡಿ.ಡಿ. ಸಂಖ್ಯೆಯನ್ನು ಟೆಂಡರ್ ಫಾರಂನಲ್ಲಿ ನಮೂದಿಸಬೇಕು. ಈ ಮೊಬಲಗನ್ನು ಟೆಂಡರ್ ಇತ್ಯರ್ಥವಾದ ನಂತರವೇ ಹಿಂದಿರುಗಿಸಲಾಗುವುದು. ಚೆಕ್‌ಗಳನ್ನು ಪರಿಗಣಿಸಲಾಗುವುದಿಲ್ಲ. ಈ ನಿಯಮ ಹಾಲಿ ಗುತ್ತಿಗೆದಾರರಿಗೂ ಅನ್ವಯವಾಗುತ್ತದೆ.**
3. ಪ್ರತಿ ಮಾರ್ಗಕ್ಕೆ ಪ್ರತ್ಯೇಕ ಟೆಂಡರ್ ಅರ್ಜಿ ಮತ್ತು ಇ.ಎಂ.ಡಿ ಸಲ್ಲಿಸುವುದು. ಪ್ರತಿ ಕಿ.ಮೀ.ಗೆ ದರ ನಮೂದಿಸುವುದು ಮತ್ತು ದರವು ಎಲ್ಲಾ ತೆರಿಗೆಗಳನ್ನು ಒಳಗೊಂಡಿರುತ್ತದೆ. ರಾಜ್ಯ/ರಾಷ್ಟ್ರಿಯ ಹೆದ್ದಾರಿ ಶುಲ್ಕಗಳನ್ನು ಒಕ್ಕೂಟದ ವತಿಯಿಂದ ನೀಡಲಾಗುವುದಿಲ್ಲ ಮತ್ತು ಸೇವಾ ತೆರಿಗೆಯನ್ನು ಗುತ್ತಿಗೆದಾರರೆ ಭರಿಸಬೇಕಾಗಿರುತ್ತದೆ.
4. ಕಾರುಗಳು ಹಳದಿ ಬೋರ್ಡ್ ಹೊಂದಿದ್ದು, 2010 ನೇ ಸಾಲಿನ ಅಥವಾ ನಂತರದ ಮಾಡೆಲ್ ಆಗಿರಬೇಕು ವಾಹನ ಚಾಲಕರು ಚಾಲನಾ ಪರವಾನಗಿ ಹಾಗೂ ಬ್ಯಾಡ್ಜ್ ಹೊಂದಿರತಕ್ಕದ್ದು.
5. ಎಲ್ಲಾ ಸಾರಿಗೆ ಟೆಂಡರ್‌ದಾರರು ಶಾಸನ ಬದ್ಧವಾದ ರೀತಿಯಲ್ಲಿ ತಮ್ಮ ನೌಕರರಿಗೆ(ಚಾಲಕರು/ಕಂಡಕ್ಟರ್)ವೇತನ/ಭವಿಷ್ಯನಿಧಿ/ ಇ.ಎಸ್.ಐ ಮುಂತಾದವುಗಳನ್ನು ಪಾವತಿಸಬೇಕಾಗಿರುತ್ತದೆ. ಟೆಂಡರ್ ಪಡೆದ ಸಾರಿಗೆ ಗುತ್ತಿಗೆದಾರರೇ ತಮ್ಮ ನೌಕರರಿಗೆ ಶಾಸನ ಬದ್ಧವಾದ ರೀತಿಯಲ್ಲಿ ವೇತನ ಪಾವತಿಸತಕ್ಕದ್ದು ಹಾಗೂ ಇದಕ್ಕೆ ಒಕ್ಕೂಟವು ಜವಾಬ್ದಾರಿಯಾಗಿರುವುದಿಲ್ಲ.
6. ಈ ಹಿಂದಿನ ಗುತ್ತಿಗೆದಾರರ ಸೇವೆಯು ತೃಪ್ತಿಕರವಾಗಿರದಿದ್ದಲ್ಲಿ ಅಂತಹ ಟೆಂಡರ್ ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕು ಟೆಂಡರ್ ಅಂಗೀಕರದ ಸಮಿತಿಯ ತೀರ್ಮಾನಕ್ಕೆ ಒಳಪಟ್ಟಿರುತ್ತದೆ.
7. ಟೆಂಡರ್‌ದಾರರು ಕಮರ್ಷಿಯಲ್ ಟೆಂಡರ್‌ನಲ್ಲಿ ಎಲ್ಲಾ ತೆರಿಗೆಗಳನ್ನು ಸೇರಿಸಿ ಕಿ.ಮೀ. ದರ ನಮೂದಿಸುವುದು.
8. ಟೆಕ್ನಿಕಲ್ ಟೆ೦ಡರ್‌ಗಳನ್ನು ದಿನಾ೦ಕ: 27.12.2016 ರ೦ದು ಬೆಳಿಗ್ಗೆ 11.30 ಕ್ಕೆ ಹಾಜರಿದ್ದ ಟೆ೦ಡರ್‌ದಾರರ ಸಮ್ಮುಖದಲ್ಲಿ ತೆರೆಯಲಾಗುವುದು. ದಿನಾಂಕ : 27.12.2016 ರಂದು ಬೆಳಿಗ್ಗೆ 11.45 ಗಂಟೆಗೆ ಕಮರ್ಷಿಯಲ್ ಟೆಂಡರ್ ತೆರೆದು ಅಗತ್ಯವಿದಲ್ಲಿ ದರ ನಿಷ್ಕರ್ಷೆ ಮಾಡಲಾಗುವುದು.
9. ಒಕ್ಕೂಟವು ಸಂಚಾರಿ ಪಶುವೈದ್ಯಕೀಯ ಸೇವೆ ನೀಡಲು ಸಂಚಾರಿ ಪಶುವೈದ್ಯಕೀಯ ವಾಹನಗಳನ್ನು ಪಡೆಯುತ್ತಿದ್ದು, ಇಂತಹ ಮಾರ್ಗಗಳಿಗೆ ಪಶುವೈದ್ಯರು ಲಭ್ಯವಿರುವವರೆಗೆ ಅಥವಾ ಎರಡು ವರ್ಷದ ಅವಧಿಗೆ ಯಾವುದು ಮೊದಲೋ ಅಲ್ಲಿಯವರೆಗೆ ಮಾತ್ರ ವಾಹನ ಉಪಯೋಗಿಸಲಾಗುವುದು.

**ಯಾವುದೇ ಕಾರಣ ನೀಡದೆ ಟೆಂಡರನ್ನು ಅಂಗಿಕರಿಸುವ /ತಿರಸ್ಕರಿಸುವ ಹಕ್ಕನ್ನು ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ. ವ್ಯವಸ್ಥಾಪಕ ನಿರ್ದೇಶಕರ ತೀರ್ಮಾನವೆ ಅಂತಿಮವಾದುದು.**

**ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ಶೇಮತಾಂ ವಿಭಾಗವನ್ನು ಮತ್ತು ಒಕ್ಕೂಟದ ವೆಬ್‌ಸೈಟ್ www.shimul.coop ಸಂಪರ್ಕಿಸಬಹುದು.**

**ಸಹಿ/-**

**ವ್ಯವಸ್ಥಾಪಕ ನಿರ್ದೇಶಕರು**
ಶಿವಮೊಗ್ಗ,ದಾವಣಗೆರೆ ಮತ್ತು ಚಿತ್ರದುರ್ಗ
ಜಿಲ್ಲಾ ಸಹಕಾರ ಹಾಲು ಒಕ್ಕೂಟ

ದಿನಾಂಕ : 22.11.2016
ಸ್ಥಳ : ಮಾಚೇನಹಳ್ಳಿ